# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ದಾವಣಗೆರೆ.

**ಎಸ್.ಸಿ. ಸಂಖ್ಯೆ 33/2024**

ಫಿರ್ಯಾದುದಾರರುಃ ಕರ್ನಾಟಕ ಸರ್ಕಾರದ ಪರವಾಗಿ ಆರಕ್ಷಕ ಉಪನಿರೀಕ್ಷಕರು, ಬಡಾವಣೆ ಪೋಲೀಸ್ ಠಾಣೆ, ದಾವಣಗೆರೆ.

-ವಿರುದ್ಧ-

ಆರೋಪಿಃ- ರಮೇಶ್ ನಾಯಕ್ ತಂದೆ ದೇವಿಂದ್ರ ನಾಯಕ್.

. . . . .

**-ದೋಷಾರೋಪಣೆ-**

ಶ್ರೀಮತಿ ರಾಜೇಶ್ವರಿ ಎನ್. ಹೆಗಡೆ, ಬಿ.ಕಾಂ., ಎಲ್.ಎಲ್.ಎಂ, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ದಾವಣಗೆರೆ ಆದ ನಾನು, ಈ ಕೆಳಕಂಡ ಆರೋಪಿತನಾದಃ-

> ರಮೇಶ್ ನಾಯಕ್ ತಂದೆ ದೇವೆಂದ್ರ ನಾಯಕ್, ವಯಸ್ಸು 31 ವರ್ಷ, ವೃತ್ತಿಃ ಸ್ವಂತ ವ್ಯಾಪಾರ, ವಾಸಃ ಎ.ವಿ ನಗರ, ಬೇತೂರ್ ರಸ್ತೆ, ದಾವಣಗೆರೆ.

ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಿಸುತ್ತೇನೆಃ-

ಮೊದಲನೇಯದಾಗಿ, ದಿನಾಂಕ 31.08.2022 ರಿಂದ 24.09.2022 ರವರೆಗೆ ಪಿ.ಜೆ ಬಡಾವಣೆ ಹೈಸ್ಕೂಲ್ ಫೀಲ್ಡ್ ನಲ್ಲಿ ಹಣೇಶ ಹಬ್ಬದ ಪ್ರಯುಕ್ತ ಗಣೇಶ ಮೂರ್ತಿ ಪ್ರತಿಷ್ಠಾಪನೆ ಮಾಡಿದ್ದು, ಈ ಪ್ರಯುಕ್ತ ಹೈಸ್ಕೂಲ್ ಫೀಲ್ಡ್ ನಲ್ಲಿ ಪ್ರತಿ ದಿನ ಸಾಂಸ್ಕೃತಿ ಕಾರ್ಯಕ್ರಮಗಳು ಮತ್ತು ಎಗ್ಜಿಮಿಷನ್ ಇರುವ ಕಾರಣ ಹೆಚ್ಚಿನ ವ್ಯಾಪಾರ ಆಗಬಹುದೆಂದು ಚಾಸಾ.1 ಆನಂದಕುಮಾರ ಮತ್ತು ಚಾಸಾ.9 ವಿರೇಶ್ ರವರು ದೋಸೆ, ಗೋಬಿ ಮಂಚೂರಿ ಕೈ ಗಾಡಿಯನ್ನು ಹಾಗೂ ಆರೋಪಿತನಾದ ನೀನು ಮಸಾಲೆ ಮಂಡಕ್ಕಿ ಕೈ ಗಾಡಿಯನ್ನು ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದು, ದಿನಾಂಕ 20.09.2022 ರಂದು ಸಂಜೆ 05.00 ಗಂಟೆಯಲ್ಲಿ ಚಾಸಾ.9 ವಿರೇಶ್ ರವರು ಪ್ರತಿ ದಿನದಂತೆ ಹೈಸ್ಕೂಲ್ ಫೀಲ್ಡ್‌ಗೆ ಕೈ ಗಾಡಿಯನ್ನು

ಹಾಕಿಕೊಂಡು ವ್ಯಾಪಾರ ಮಾಡುತ್ತಿರುವಾಗ ಆರೋಪಿತನಾದ ನೀನು ಚಾಸಾ.9 ರವರಿಗೆ ನಮ್ಮ ಗಾಡಿಯ ಮುಂದೆ ನೀನು ಯಾಕೆ ಗೋಬಿ ಗಾಡಿ ಹಾಕುತ್ತೀಯಾ ಎಂದು ಗಲಾಟೆ ಮಾಡಿ ಕೈಗಳಿಂದ ಚಾಸಾ.9 ರವರಿಗೆ ಹೊಡೆದಿದ್ದು, ನಂತರ ದಿನಾಂಕ 21.09.2022 ರಂದು ಸಂಜೆ 05.30 ಗಂಟೆಯಲ್ಲಿ ಚಾಸಾ.1 ಮತ್ತು ಚಾಸಾ.9 ರವರು ವ್ಯಾಪಾರ ಮಾಡಲು ಹೈಸ್ಕೂಲ್ ಫೀಲ್ಡ್‌ನಲ್ಲಿ ಕೈ ಗಾಡಿಯನ್ನು ತಳ್ಳಿಕೊಂಡು ಹೋಗಿ ಸಾಮಾನುಗಳನ್ನು ಜೋಡಿಸುತ್ತಿರುವಾಗ ಆರೋಪಿತನಾದ ನೀನು ಚಾಸಾ.1 ಮತ್ತು ಚಾಸಾ.9 ರವರೊಂದಿಗೆ ಗಲಾಟೆ ಮಾಡಿ ಅವರ ಮೇಲೆ ಹಲ್ಲೆ ಮಾಡಿ, ಅವರಿಗೆ ಸಾಮಾನ್ಯ ಸ್ವರೂಪದ ಗಾಯವನ್ನೂಂಟು ಮಾಡಿರುತ್ತೀರಿ. ಆ ಮೂಲಕ ಆರೋಪಿತನಾದ ನೀನು ಭಾರತ ದಂಡ ಸಂಹಿತೆಯ ಕಲಂ 323 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ಸತ್ರ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ, ಮೇಲ್ಕಂಡ ಘಟನೆಗೆ ಮುಂದುವರೆದು, ಆರೋಪಿತನಾದ ನೀನು ಅಪಾಯಕಾರಿ ಆಯುಧವಾದ ತರಕಾರಿ ಕತ್ತರಿಸುವ ಚಾಕುವಿನಿಂದ ಚಾಸಾ.1 ಆನಂದಕುಮಾರ ರವರ ಹೊಟ್ಟೆಗೆ ಚುಚ್ಚಲು ಹೋಗಿದ್ದು, ಅವರು ತಪ್ಪಿಸಿಕೊಂಡು ಹೋಗುವಾಗ ಅವರ ಎಡ ಭುಜಕ್ಕೆ ಚಾಕುವಿನಿಂದ ಕೋಯ್ದು ಸ್ವ-ಇಚ್ಛೆಯಿಂದ ರಕ್ತಗಾಯವನ್ನುಂಟು ಮಾಡಿರುತ್ತೀರಿ. ಆ ಮೂಲಕ ಆರೋಪಿತನಾದ ನೀನು ಭಾರತ ದಂಡ ಸಂಹಿತೆಯ ಕಲಂ 324 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ಸತ್ರ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಮೇಲ್ಕಂಡ ಘಟನೆಗೆ ಮುಂದುವರೆದು ಆರೋಪಿತನಾದ ನೀನು ಚಾಸಾ.1 ಆನಂದಕುಮಾರ ರವರನ್ನು ಕೊಲೆ ಮಾಡುವ ಉದ್ದೇಶದಿಂದ ತರಕಾರಿ ಕತ್ತರಿಸುವ ಚಾಕುವಿನಿಂದ ಚಾಸಾ.1 ಆನಂದಕುಮಾರ ರವರ ಹೊಟ್ಟೆಗೆ ಚುಚ್ಚಲು ಹೋಗಿದ್ದು, ಅವರ ತಪ್ಪಿಸಿಕೊಂಡು ಹೋಗುವಾಗ ಆರೋಪಿತನಾದ ನೀನು ಅವರನ್ನು ಹಿಂಬಾಲಿಸಿಕೊಂಡು ಹೋಗಿ ಅವರ ಎಡ ಭುಜಕ್ಕೆ ಕೋಯ್ದು ರಕ್ತಗಾಯವನ್ನುಂಟು ಮಾಡಿದ್ದು, ಆರೋಪಿತನಾದ ನೀನು ಯಾವ ಕೃತ್ಯವನ್ನು ಯಾವ ಉದ್ದೇಶ ಅಥವಾ ತಿಳುವಳಿಕೆಯಿಂದ ಮತ್ತು ಯಾವ ಪರಿಸ್ಥಿತಿಯಲ್ಲಿ

ಮಾಡಿದರೆ ಆ ಕೃತ್ಯದಿಂದ ಮರಣವನ್ನುಂಟು ಮಾಡಿದರೆ ಕೊಲೆಯ ಬಗ್ಗೆ ತಪ್ಪಿತಸ್ಥರಾಗುತ್ತೀರೆಂದು ತಿಳಿದು, ಸದರಿ ಕೃತ್ಯವನ್ನು ಮಾಡಿರುತ್ತೀರಿ. ಆ ಮೂಲಕ ಆರೋಪಿತನಾದ ನೀನು ಭಾರತ ದಂಡ ಸಂಹಿತೆಯ ಕಲಂ 307 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ಸತ್ರ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ನಾಲ್ಕನೇಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಮೇಲ್ಕಂಡ ಘಟನೆಗೆ ಮುಂದುವರೆದು, ಆರೋಪಿತನಾದ ನೀನು ಚಾಸಾ.1 ಆನಂದಕುಮಾರ ಮತ್ತು ಚಾಸಾ.9 ವಿರೇಶ್ ರವರಿಗೆ ಸೂಳೆ ಮಗನೆ ಅಂತ ಅವಾಚ್ಯ ಶಬ್ದಗಳಿಂದ ಬೈದು, ಉದ್ದೇಶಪೂರ್ವಕವಾಗಿ ಅವಮಾನ ಮಾಡಿ ಆ ಮೂಲಕ ಚಾಸಾ.1 ಮತ್ತು ಚಾಸಾ.9 ಇವರಿಗೆ ಉದ್ರೇಕವನ್ನುಂಟು ಮಾಡಿದರೆ ಅಂಥ ಉದ್ರೇಕದಿಂದ ಚಾಸಾ.1 ಮತ್ತು ಚಾಸಾ.9 ಇವರು ಶಾಂತಿಭಂಗವನ್ನು ಉಂಟು ಮಾಡಲೆಂಬ ಅಥವಾ ಇತರೆ ಯಾವುದೇ ಅಪರಾಧವನ್ನು ಮಾಡಲೆಂಬ ಉದ್ದೇಶದಿಂದ ಅಥವಾ ಹಾಗೆ ಆಗುವ ಸಂಭವವಿದೆಯೆಂದು ತಿಳಿದು ಉದ್ದೇಶಪೂರ್ವಕವಾಗಿ ಚಾಸಾ.1 ಮತ್ತು ಚಾಸಾ.9 ಇವರನ್ನು ಅವಮಾನ ಮಾಡಿರುತ್ತೀರಿ. ಆ ಮೂಲಕ ಆರೋಪಿತನಾದ ನೀನು ಭಾರತ ದಂಡ ಸಂಹಿತೆಯ ಕಲಂ 504 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ಸತ್ರ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಮೇಲ್ಕಂಡ ಘಟನೆಗೆ ಮುಂದುವರೆದು, ಆರೋಪಿತನಾದ ನೀನು ಚಾಸಾ.1 ಆನಂದಕುಮಾರ ಮತ್ತು ಚಾಸಾ.9 ವಿರೇಶ್ ರವರನ್ನು ಈ ದಿನ ನೀನು ಬಚಾವ್ ಆಗಿದ್ದಿಯ ನಾಳೆ ಇಲ್ಲಿ ಗಾಡಿಯನ್ನು ಹಾಕು ಒಂದು ಗತಿ ಕಾಣಿಸುತ್ತೇನೆಂದು, ಪ್ರಾಣ ಬೆದರಿಕೆ ಹಾಕಿರುತ್ತೀರಿ. ಆ ಮೂಲಕ ಅಪರಾಧಿಕ ಬಯೋತ್ಪಾದನೆಯನ್ನುಂಟು ಮಾಡಿ, ಚಾಸಾ.1 ಮತ್ತು ಚಾಸಾ.9 ಇವರಿಗೆ ಅಪಾಯದ ಭೀತಿಯನ್ನು ಹುಟ್ಟಿಸುವಂಥ ಉದ್ದೇಶವಾಗಿತ್ತು ಮತ್ತು ಅವರು ಮಾಡಬೇಕಾದ ಕೃತ್ಯವನ್ನು ಮಾಡದಂತೆ ಉದ್ದೇಶಿಸಿ ಮಾಡಿದ್ದಾಗಿತ್ತು. ಆ ಮೂಲಕ ಆರೋಪಿತನಾದ ನೀನು ಭಾರತ ದಂಡ ಸಂಹಿತೆಯ ಕಲಂ 506 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ಸತ್ರ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಮತ್ತು ಆರೋಪಿತನಾದ ನೀನು ಮೇಲೆ ಹೇಳಿದ ಆರೋಪಕ್ಕೆ ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ 29 ನೇ ದಿವಸ ಜನವರಿ ಮಾಹೆಯ 2025 ನೇ ಇಸವಿಯಂದು.

(ರಾಜೇಶ್ವರಿ ಎನ್. ಹೆಗಡೆ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

ಆರೋಪಿ ಃ ರಮೇಶ್ ನಾಯಕ್ ತಂದೆ ದೇವಿಂದ್ರ ನಾಯಕ್.

## ಆರೋಪಿಯ ಆಪಾದನೆ

ಪ್ರಶ್ನೆ ೧: ನಿಮಗೆ ಈಗ ಓದಿ ವಿವರಿಸಿ ಹೇಳಲಾದ ದೋಷಾರೋಪಣೆ ಅರ್ಥವಾಯಿತೇ?

ಉತ್ತರ:

ಪ್ರಶ್ನೆ ೨: ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಲು ಬಯಸುವಿರಾ?

ಉತ್ತರ:

(ದಿನಾಂಕ 29 ನೇ ದಿವಸ ಜನವರಿ ಮಾಹೆಯ 2025 ರಂದು ತೆರೆದ ನ್ಯಾಯಾಲಯದಲ್ಲಿ ಆರೋಪಿತನಿಗೆ ದೋಷಾರೋಪಣೆಯನ್ನು ಓದಿ ಹೇಳಿ ನಂತರ ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು).

(ರಾಜೇಶ್ವರಿ ಎನ್. ಹೆಗಡೆ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.